# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 14/3, 2ನೇ ಮಹಡಿ, ರಾಷ್ಟ್ರೋತ್ಥಾನ ಪರಿಷತ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು - 560 001

ದೂರವಾಣಿ : 22215383, 22215679, 22242006, 22215069 ಫ್ಯಾಕ್ಸ್ : 080-22217702

ವೆಬ್‌ಸೈಟ್ : www.kiadb.in ಇ-ಮೇಲ್: ceoemkiadb@gmail.com

ಸಂಖ್ಯೆ : ಕಕೈಪ್ರಮಂ/ಆಡಳಿತ-14589 II/6447/2015 -16 ದಿನಾಂಕ: 1-8-2015

## ಸುತ್ತೋಲೆ

ವಿಷಯ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಂಚಿಕೆ ಮಾಡಲಾಗುವ ಭೂಮಿಯ ದರದ ಮೇಲೆ ರೂ.15 ರಿಂದ 35 ಲಕ್ಷಗಳವರೆಗೆ ರಿಯಾಯಿತಿಯನ್ನು ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಸಿಐ 147 ಸಿಎಸ್‌ಸಿ 2015 ದಿನಾಂಕ 22-7-2015.

-oOo-

ರಾಜ್ಯದ ಹೊಸ ಕೈಗಾರಿಕಾ ನೀತಿ 2014-19 ರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಂಚಿಕೆ ಮಾಡಲಾಗುವ ಜಮೀನಿನ ದರದ ಮೇಲೆ ರೂ.15 ರಿಂದ 35 ಲಕ್ಷಗಳವರೆಗೆ ಸಹಾಯಧನವನ್ನು ನೀಡಲು ಘೋಷಿಸಲಾಗಿರುತ್ತದೆ. ಅದರಂತೆ, ಉಲ್ಲೇಖದಲ್ಲಿ ನಮೂದಿಸಲಾದ ಸರ್ಕಾರದ ಆದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ಹಂಚಿಕೆ ಮಾಡಲಾಗುವ ಜಮೀನಿನ ದರದ ಮೇಲೆ ಈ ಕೆಳಕಂಡಂತೆ ರಿಯಾಯಿತಿಯನ್ನು ನೀಡಲು ಅನುಮೋದನೆಯನ್ನು ನೀಡಲಾಗಿರುತ್ತದೆ:

| | |
|---|---|
| ಅ) ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿ ಇನ್ನುಳಿದ ಪ್ರದೇಶ: | |
| ವಲಯ-1 ಮತ್ತು 2 | ಶೇ 40 – ಗರಿಷ್ಠ ಮಿತಿ ರೂ 15 ಲಕ್ಷಗಳು |
| ವಲಯ-3 | ಶೇ 30 – ಗರಿಷ್ಠ ಮಿತಿ ರೂ 25 ಲಕ್ಷಗಳು |
| ವಲಯ-4 | ಶೇ 25 – ಗರಿಷ್ಠ ಮಿತಿ ರೂ 35 ಲಕ್ಷಗಳು |
| ಆ) ಹೈದರಾಬಾದ್-ಕರ್ನಾಟಕ ಪ್ರದೇಶ | |
| ವಲಯ-1 | ಶೇ 40 – ಗರಿಷ್ಠ ಮಿತಿ ರೂ 25 ಲಕ್ಷಗಳು |
| ವಲಯ-2 | ಶೇ 40 – ಗರಿಷ್ಠ ಮಿತಿ ರೂ 20 ಲಕ್ಷಗಳು |

ಸರ್ಕಾರದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಅಲ್ಲದೆ, ಹೊಸ ಕೈಗಾರಿಕಾ ನೀತಿ 2014-19 ರಲ್ಲಿ ರಾಜ್ಯದಲ್ಲಿನ ತಾಲ್ಲೂಕುಗಳನ್ನು ವಿವಿಧ ವಲಯಗಳನ್ನಾಗಿ ವರ್ಗೀಕರಿಸಿದ್ದು ವಿವರಗಳನ್ನು ಮಂಡಳಿಯ ಜಾಲತಾಣ www.kiadb.in ರಲ್ಲಿ ತೋರಿಸಲಾಗಿದೆ.

ಆದಕಾರಣ, ಮಂಡಳಿಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಜಮೀನನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಸರ್ಕಾರದ ಆದೇಶದಂತೆ ರಿಯಾಯಿತಿಯನ್ನು ನೀಡಲು ಹಾಗೂ ಸರ್ಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಗೆ:

1. ಕಾರ್ಯದರ್ಶಿ, ಕ.ಕೈ.ಪ್ರ.ಮಂ., ಕೇಂದ್ರ ಕಚೇರಿ, ಬೆಂಗಳೂರು
2. ಎಲ್ಲ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯಪಾಲಕ ಅಭಿಯಂತರರು, ಕ.ಕೈ.ಪ್ರ.ಮಂ. ವಲಯ ಕಚೇರಿಗಳು
3 ಎಲ್ಲ ಉಪ ಅಭಿವೃದ್ಧಿ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ಕೈ.ಪ್ರ.ಮಂ. ವಲಯ ಕಚೇರಿಗಳು
4. ಎಲ್ಲ ಸಹಾಯಕ ಕಾರ್ಯದರ್ಶಿಗಳು, ಕ.ಕೈ.ಪ್ರ.ಮಂ. ಕೇಂದ್ರ ಕಚೇರಿ
5. ಎಲ್ಲ ಸಹಾಯಕ ಕಾರ್ಯದರ್ಶಿಗಳು, ಕ.ಕೈ.ಪ್ರ.ಮಂ. ವಲಯ ಕಚೇರಿಗಳು